## 34. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಾಮೇನಹಳ್ಳಿ, ಶಿವಮೊಗ್ಗ

ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ತಾಲ್ಲೂಕಿನ ಕುಂಸಿ ಕ್ಲಸ್ಟರ್ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಾಮೇನಹಳ್ಳಿಯು ಆಯನೂರು–ಹಾರ್ನಹಳ್ಳಿ–ಕುಂಸಿ ಮಾರ್ಗದಲ್ಲಿರುವ ಶಾಲೆಯಾಗಿದೆ ಊರಿನ ದ್ವಾರ ಬಾಗಿಲಿನಲ್ಲಿಯೇ ಇರುವ ನಮ್ಮ ಶಾಲೆಯು ಹಸಿರಿನಿಂದ ಕಂಗೊಳಿಸುತ್ತಿದ್ದು ಎಲ್ಲರ ಕಣ್ಣುಗಳನ್ನು ತನ್ನತ್ತ ಸೆಳೆಯುತ್ತದೆ. 1901 ರಲ್ಲಿ ಆರಂಭವಾದ ನಮ್ಮ ಶಾಲೆಯು ಪ್ರಾರಂಭದಲ್ಲಿ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದು, 2006–07 ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಉನ್ನತೀಕರಣಗೊಂಡಿದೆ. ಪ್ರಸ್ತುತ ಸಾಲಿನಲ್ಲಿ 1–7 ನೇ ತರಗತಿವರೆಗೆ ಒಟ್ಟು 44 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು. 4ಜನ ಶಿಕ್ಷಕರು ಹಾಗೂ 2 ಜನ ಅಕ್ಷರ ದಾಸೋಹ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಮ್ಮ ಶಾಲೆಯು ಸುಸಜ್ಜಿತವಾದ ಶಾಲಾಕಟ್ಟಡ, ಆಟದ ಮೈದಾನ, ಜೋಕಾಲಿ, ಜಾರುಬಂಡೆ, ಉತ್ತಮ ಶೌಚಾಲಯ, ಸುಂದರಕೈತೋಟ, ಬಯಲುರಂಗಮಂದಿರ, ಸ್ವಚ್ಛಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿದ್ದು ಕುಂಸಿ ಕ್ಲಸ್ಟರ್ ವ್ಯಾಪ್ತಿಯಲ್ಲಿ ಉತ್ತಮ ಶಾಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.






### ಸುಂದರ ಶಾಲಾ ಕಟ್ಟಡ

ಕಿರಿಯ ಪ್ರಾಥಮಿಕ ಶಾಲೆಯಾಗಿದ್ದ ನಮ್ಮ ಶಾಲೆಯು ಹಿರಿಯ ಪ್ರಾಥಮಿಕ ಶಾಲೆಯಾದಾಗ ಮೊದಲು ಎದುರಾಗಿದ್ದು ಕೊಠಡಿಗಳ ಸಮಸ್ಯೆ. 2 ವರ್ಷಗಳ ಕಾಲ ಎರಡೇ ತರಗತಿ ಕೋಣೆಗಳಲ್ಲಿ ಹಾಗೂ ಊರಿನ ಹಾಲಿನ ಡೈರಿಯಲ್ಲಿ 1 ರಿಂದ 7ನೇ ತರಗತಿಗಳ ಬೋಧನೆ ಪ್ರಕ್ರಿಯೆ ನಡೆಸಲಾಯಿತು. 2007–08 ನೇ ಸಾಲಿನಲ್ಲಿ ಎಸ್.ಎಸ್.ಎ. ವತಿಯಿಂದರೂ 4 ಲಕ್ಷಗಳ ವೆಚ್ಚದಲ್ಲಿ 3 ಕೊಠಡಿಗಳ ಸುಂದರ ಶಾಲಾ ಕಟ್ಟಡ ತಲೆಎತ್ತಿತು. ಮುಂದುವರೆದು 2011 – 12 ನೇ ಸಾಲಿನಲ್ಲಿ ಪ್ರತ್ಯೇಕ ಮುಖ್ಯೋಪಾಧ್ಯಾಯರ ಕೊಠಡಿಯು ನಿರ್ಮಾಣಗೊಂಡಿತು

ಶಾಲೆಯ ಕಟ್ಟಡವನ್ನು ಸುಂದರಗೊಳಿಸಲು ಗ್ರಾಮಸ್ಥರ ಕೊಡುಗೆಗಳಿಂದ ಗೋಡೆಗಳ ಮೇಲೆ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳನ್ನು ಹಾಗೂ ಕಲಿಕೆಗೆ ಸಂಬಂದಿಸಿದ ವಿಷಯಗಳನ್ನು ಬರೆಸಲಾಯಿತು. ಮಾನವ ಬಲದೊಂದಿಗೆ

ದೈವ ಬಲದ ಪ್ರೇರಣೆ ಇದ್ದರೆ ಏನನ್ನಾದರೂ ಸಾಧಿಸಬಹುದು ಎಂಬ ಆಶಯದಿಂದ ಶಾಲಾ ಕಾರಿಡಾರ್‌ನಲ್ಲಿ ವಿದ್ಯಾಧಿದೇವತೆ ಶಾರದಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದು ಇದು ಶಾಲೆಗೊಂದು ಶೋಭೆಯನ್ನು ತಂದಿದೆ ಎಂದರೆ ತಪ್ಪಾಗಲಾರದು.

### ಶಾಲೆಗೊಂದು ಸುಂದರ ಉದ್ಯಾನವನ

ಶಾಲಾ ಆವರಣದಲ್ಲಿ ಸುಂದರ ಪರಿಸರದ ವ್ಯವಸ್ಥೆಗಾಗಿ ವಿವಿಧ ಹೂಗಳ , ಹಣ್ಣುಗಳ , ಔಷಧೀಯ ಗಿಡಗಳನ್ನು ನೆಡಲಾಗಿದೆ. ಡ್ರಿಪ್ ವ್ಯವಸ್ಥೆಯಿಂದ ನೀರಿನ ಪೂರೈಕೆ ಮಾಡಲಾಗುತ್ತಿದ್ದು, ಶಾಲೆಯ ಆವರಣ ಹಸಿರಿನಿಂದ ನಳನಳಿಸುತ್ತಿದೆ. ಪ್ರತಿನಿತ್ಯ ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳೇ ಶಾಲಾವರಣ ಸ್ವಚ್ಛತೆ ಹಾಗೂ ಸುಂದರ ಉದ್ಯಾನವನದ ನಿರ್ವಹಣೆ ಮಾಡುತ್ತಿದ್ದಾರೆ.

ಶಾಲೆಯ ಮಕ್ಕಳಿಗೆ ಊಟಕ್ಕೆ ಮುನ್ನ ಹಾಗೂ ನಂತರ ಕೈ ಹಾಗೂ ತಟ್ಟೆ ಲೋಟ ತೊಳೆಯಲು ಅನುಕೂಲವಾಗುವಂತೆ 5-6 ನಲ್ಲಿಗಳನ್ನೊಳಗೊಂಡ ಕೈ ತೊಳೆಯುವ ಘಟಕವನ್ನು ಸ್ಥಾಪಿಸಲಾಗಿದೆ.





### ಶಾಲೆಗೊಂದು ಬಯಲು ರಂಗಮಂದಿರ

ಶಾಲಾ ರಾಷ್ಟ್ರೀಯ ಕಾರ್ಯಕ್ರಮ, ವಾರ್ಷಿಕೋತ್ಸವ ಮುಂತಾದ ಕಾರ್ಯಕ್ರಮಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ 2010 ನೇ ಸಾಲಿನಲ್ಲಿ ಆಗಿನ ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಒಂದು ಲಕ್ಷ ರೂಗಳ ವೆಚ್ಚದಲ್ಲಿ ಶಾಲಾವರಣದಲ್ಲಿ ಬಯಲು ರಂಗಮಂದಿರವೊಂದು ನಿರ್ಮಾಣವಾಗಿದ್ದು ಎಲ್ಲಾ ಕಾರ್ಯಕ್ರಮಗಳನ್ನು ನಡೆಸಲು ಸಮರ್ಪಕವಾದ ವೇದಿಕೆಯಾಗಿದೆ.

### ಕಲಿಕಾ ಪೂರಕ ತರಗತಿ ಕೊಠಡಿಗಳು

ನಮ್ಮ ಶಾಲೆಯಲ್ಲಿ ನಲಿಕಲಿ ತರಗತಿಯನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಲಾಗಿದೆ. ಪ್ರತಿ ತರಗತಿಗೂ ಪ್ರತ್ಯೇಕ ರ್‍ಯಾಕ್ ವ್ಯವಸ್ಥೆಯನ್ನು ಮಾಡಲಾಗಿದ್ದು ಮಕ್ಕಳು ಸುಲಭವಾಗಿ ಕಾರ್ಡ್‌ಗಳನ್ನು ತೆಗೆದುಕೊಳ್ಳಲು ಹಾಗೂ ಇಡಲು ಅನುಕೂಲವಾಗುವಂತೆ ಮಾಡಲಾಗಿದೆ. ಕಲಿಕಾ ಚಪ್ಪರವನ್ನು ನಿರ್ಮಿಸಿ, ಅದರಲ್ಲಿ ಮಕ್ಕಳಿಂದ ತಯಾರಾದ ವಿವಿಧ ಚಟುವಟಿಕೆಗಳನ್ನೊಳಗೊಂಡ ಚಾರ್ಟ್‌ಗಳನ್ನು ಹಾಕಲಾಗಿದೆ. ಅಲ್ಲದೆ ವಿವಿಧ ಚಟುವಟಿಕೆಗಳಿಗೆ ಬೇಕಾದ ಆಟದ ಬೋರ್ಡ್‌ಗಳು, ಅಕ್ಷರಗಳ ಫಲಕಗಳು, ಪದಗಳ ಚಾರ್ಟ್‌ಗಳು

ಮುಂತಾದವುಗಳನ್ನು ಪ್ರದರ್ಶಿಸಿದ್ದು ಕಲಿಕೆಗೆ ಪೂರಕವಾಗುವಂತೆ ಗೆರೆಗಳನ್ನು ಹಾಕಲಾಗಿದೆ. ಇದೇರೀತಿ ಉಳಿದ ತರಗತಿ ಕೋಣೆಗಳಲ್ಲಿಯೂ ಕಲಿಕೆಗೆ ಪೂರಕವಾದ ಚಾರ್ಟ್‌ಗಳುನ್ನು ಅಳವಡಿಸಿ ಸುಂದರಗೊಳಿಸಲಾಗಿದೆ. ಗ್ರಾಮಸ್ಥರ ಸಹಕಾರದಿಂದ ಶಾಲೆಗೆ ಕಂಪ್ಯೂಟರ್ ಹಾಗೂ ಜೆರಾಕ್ಸ್ ಮಷೀನನ್ನು ಖರೀದಿಸಲಾಗಿದ್ದು ಈ ಮೂಲಕ ಮಕ್ಕಳ ಕಲಿಕೆಗೆ ಡಿಜಿಟಲ್ ಸ್ಪರ್ಶ ನೀಡಲಾಗಿದೆ.

## ನಮ್ಮ ಮಕ್ಕಳ ಸಾಧನೆ

ನಮ್ಮ ಶಾಲೆಯು ಕೇವಲ ಭೌತಿಕ ಸೌಂದರ್ಯಕ್ಕೆ ಆದ್ಯತೆ ನೀಡದೆ ಮಕ್ಕಳ ಬೌದ್ಧಿಕ ಅಭಿವೃದ್ಧಿಗೂ ಆದ್ಯತೆ ನೀಡಲಾಗಿದೆ. ಮಕ್ಕಳು ಸ್ಪಷ್ಟ ಓದು, ಶುದ್ಧ ಬರಹ, ಮಗ್ಗಿ ಮತ್ತು ಸರಳ ಲೆಕ್ಕಾಚಾರವನ್ನು ಮಾಡುತ್ತಾರೆ. ಪ್ರತಿವರ್ಷವೂ ನಡೆಯುವ ಪ್ರತಿಭಾಕಾರಂಜಿ, ಕ್ರೀಡೆ, ಕಲಿಕೋತ್ಸವ ಮುಂತಾದ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ ತಮ್ಮ ಪ್ರತಿಭೆಗೆ ತಕ್ಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಕೋಲಾಟದಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು ಉತ್ತಮ ಪ್ರದರ್ಶನ ನೀಡಿರುತ್ತಾರೆ.

ಈ ಎಲ್ಲಾ ಯಶಸ್ಸಿಗೂ ಶಾಲಾ ಶಿಕ್ಷಕರ ನಿರಂತರ ಪರಿಶ್ರಮ, ಕ್ರಿಯಾಶೀಲ ಎಸ್.ಡಿ.ಎಂ.ಸಿ.ಯವರ ಸಹಕಾರ, ಊರಿನ ಪೋಷಕರ ಕಾಳಜಿ–ನೆರವು, ಮಕ್ಕಳ ಜವಾಬ್ದಾರಿಯುತ ಕಲಿಕೆ ಮತ್ತು ಇಲಾಖಾಧಿಕಾರಿಗಳ ಸಹಕಾರಗಳೇ ಕಾರಣ. ನಮ್ಮ ಶಾಲೆಯ ಯಶಸ್ಸಿನ ಹಿಂದಿರುವ ಎಲ್ಲಾ ಕೈಗಳಿಗೂ ನಮ್ಮ ನಮನಗಳು.

